Regd No. M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 1.9] ಗುರುವಾರ 19—12—46 [ಬಿಡಿ ಪ್ರತಿ 3 ಪೈ

ಭಾರತಕ್ಕೆ ಭಂಗಾರ

ಕರಿಂಚಿ ಡಿ 17— ಭಾರತಕ್ಕೆ ಹೆಚ್ಚಿ ಚ್ಛಾಯಿ ಅಮೇರಿಕಾದಿಂದ ಭಂಗಾರ ಒರುತ್ತಿದೆ ಈ ತಿಂಗಳಲ್ಲಿ 1 ಲಕ್ಷ ತೋಲಾ ಭಂಗಾರ ಆಮದಾಗುವುದಂದು ಹೇಳಲಾಗಿದೆ. ಆದರೆ ಇಲ್ಲಿಂದ ಹೊರಕ್ಕೂ ಹಾರುತ್ತಿದೆಯಲ್ಲಾ !

ಆರ್ಧ ಟ್ಕ ಚೈನಾ ನೋಟು

ಷಾಂಘೈ ಡಿ 16— ಆರ್ಧ ಟ್ಕ ಚೈನಾ ನ್ಯಾಷನಲ್ ನೋಟು ಗಳನ್ನು ಕೊಂಡೊಯ್ದ ಡೆಕೋಟಾ ವಿಮಾನವು ಪತ್ತೆಯಿಲ್ಲ.

ಕಳ್ಳಪೇಟೆ ಪತ್ತೆ

ಮದರಾಸು ಡಿ 17— ಕಳ್ಳಪೇಟೆ ನಿರೋಧ ಅಧಿಕಾರಿಗಳು ಒಬ್ಬ ಕಬ್ಬಿಣ ವ್ಯಾಪಾರಿಯನ್ನು ದಸ್ತಗಿರಿ ಮಾಡಿ ಅವನು ಮುಚ್ಚಿಟ್ಟ ದಾಸ್ತಾನು ಮಾಡಿದ್ದ 1 ಲಕ್ಷ ರೂ. ಬೆಲೆಯ ಉಕ್ಕು ಕಬ್ಬಿಣ ಗಳನ್ನು ಪತ್ತೆ ಮಾಡಿರುವರು.

ಉದಾರ ದಾನ

ಹೈದರಾಬಾದು — ನೈಜಾಂ ಸಂಕಾಂದವರು ಪಾಂಡಿಚರಿಯ ಫ್ರೆಂಚ್ ಇಂಡಿಯಾ ಇತಿಹಾಸ ಸಂಘಕ್ಕೆ 3000 ರೂ ಕೊಟ್ಟರುವರು.

ಯಹೂದಿಗಳಿಗೆ ಸೌಕರ್ಯ

ಜರೂಸೆಲಂ ಡಿ 16 — 1150 ಯಹೂದಿಯಹೂದ್ಯರಿಗೆ ಪ್ಯಾಲಿಸ್ಟೈನಿಗೆ ಬರಲು ಆಸ್ಪದ ದೊರೆತಿದೆ.

ಸ್ಟಾಲಿನ್ನನ್ನು ಅಗೌರಿಸಿದ್ದಕ್ಕೆ ?

ನ್ಯೂಕಿಂಗ್ ಡಿ 16 — ಪ್ರಕಟಣಾ ವಿಧಿಗೆ ವಿರೋಧವಾಗಿ ಜ|| ಸ್ಟಾಲಿನ್ನರವೇಲೆ ಅಗೌರವವಾಗಿ ಬರೆದದ್ದುಕ್ಕಾಗಿ ಒಂದು ಚೈನೀ ಪತ್ರಿಕೆಯು 1 ವಾರ ನಿಲ್ಲಿಸಲ್ಪಟ್ಟಿದೆ

ಕೊಬ್ಬರಿ ಎಣ್ಣೆ ಮಾಯವಾಗಿದೆ

ಎರ್ನಾಕುಲಂ ಡಿ 17 — ಕೊಬ್ಬರಿ ಎಣ್ಣೆಯ ಮಾರಾಟದ ಬೆಲೆಯು ನಿಗದಿ ಮಾಡಲ್ಪಟ್ಟಿದ್ದರಿಂದಲ್ಲಿಯ ವ್ಯಾಪಾರ ಸ್ಥಳಗಳಲ್ಲಿ ಏಕದಂ ನಾಯವಾಗಿ ಬಿಟ್ಟಿದೆ. ಜನರಿಗೆ ತುಂಬಾ ತೊಂದರೆಯಾಗಿದೆ. ಸರಕಾರದವರು ಈ ಮುಚ್ಚಿಡಲ್ಪಟ್ಟ ದಾಸ್ತಾನು ಮಾಡಲಾಗಿರುವ ಎಣ್ಣೆಯನ್ನು ಪತ್ತೆ ಮಾಡಲು ಕೈ ಹಚ್ಚುವರೆಂದು ಹೇಳಲಾಗಿದೆ.

ಭಾರತಕ್ಕೆ ಅಮೇರಿಕಾ ಧಾನ್ಯ

ವಾಷಿಂಗ್ಟನ್ ಡಿ 17 — ಭಾರತಕ್ಕೆ 1947 ನೇ ಜನವರಿಯಲ್ಲಿ 68000 ಟನ್ ಅಮೇರಿಕಾ ಧಾನ್ಯ ನಿಗದಿಯಾಗಿದೆ.

ಮುಸ್ಲಿಮರಿಗೆ ವಿಶ್ವಾಸವೇ ?

ಕರಾಚಿ ಡಿ 18 — ಬೇಹಾರಿನಿಂದ ನಿರಾಶ್ರಿತರಾಗಿ ಒರಿವವರ ಸಲುವಾಗಿ ಮೊಖಿ ಅರಣ್ಯದಲ್ಲಿ 2 ಸಾವಿರ ಎಕರೆ ಭೂಮಿಯನ್ನು ವಿಶಾಲವಾಗಿಡಬೇಕೆಂದು ಪ್ರಾಂತೀಯ ಲೀಗಿನ ಕಾರ್ಯಕಾರಿ ಸಮಿತಿ ನಿರ್ಣಯಿಸಿದೆ.

ಪೊಲೀಸ್ ಮುಕ್ತಿಗೆಯಲ್ಲಿ ಮಂತ್ರಿ

ಹೋದವಾರ ಲಾಹೋರಿನಲ್ಲಿ ಒಂದು ವಿಚಿತ್ರ ಘಟನೆ ಸಂಭವಿಸಿತು. ಲಾಹೋರು ಜಿಲ್ಲಾ ಕಾಂಗ್ರೆಸ ಕಮೀಟಿಯು ಅಧ್ಯಕ್ಷರನ್ನು ಅಭಿನಂದಿಸುವ ಕುರಿತು ಒಂದು ಪ್ರಖ್ಯಾತ ಉಪಾಹಾರ ಗೃಹದಲ್ಲಿ ಔತಣವನ್ನು ಏರ್ಪಡಿಸಿದ್ದರು. ಪಂಜಾಬ ಸರಕಾರದ ಆರ್ಥಿಕ ವಂಕ್ರಿಗಳೂ ಪಂಜಾಬ ಪ್ರಾಂತೀಕ ಕಾಂಗ್ರೇಸ ಸಭಾಸದರ್ಶಮುಖಂಡರೂ ಆದ ಲಾಲಾ ಭೀಮಸೇನ ಸಾಚಾರವರು ಈ ಔತಣದಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದರು. ಆಹಾರಾಭಾವದ ನೂಲಕ ಎಲ್ಲೆಡೆಯಲ್ಲಿಯೂ ಹಾಹಾಕಾರವೇಳುವಾಗ ಈ ಔತಣವು ಹಿಂದಿನ ರಾಜಾ ಮಹಾರಾಜರವರ ಮೇಜವಾನಿಗಳನ್ನೇ ನಿಮಿರಿಸಿತ್ತಿತ್ತಂತೆ. ನೂರಾರು ಆಮಂತ್ರಿತರು ವಿರಾಜಮಾನರಾಗಿದ್ದರಂತೆ. ಮಂತ್ರಿಗಳು ಜಿಲ್ಲಾ ಕಾಂಗ್ರೆಸ ಅಧ್ಯಕ್ಷರು ಕಾಂಸಿಗೆ ಸಲ್ಲಿಸಿದ ಸೇವೆಯ ಗುಣಗಾನಮಾಡುವಾಗಲೇ ಪೋಲೀಸರದರ್ಶನವಾಯಿತೆಂದೂ ಆಷ್ಟಕ್ಕೆ ಸಮಾರಂಭವು ಮುಗಿಯಿತೆಂದೂ ತಿಳಿದುಬಂದಿದೆ. ಇದೇ ರೀತಿಯಲ್ಲಿ ಲಾಹೋರಿನಲ್ಲಿ ಸುಮಾರು 15 ಸಮಾರಂಭಗಳನ್ನು ಪೋಲಿಸರು ಮುತ್ತಿಗೆ ಹಾಕಿದ್ದರಂತೆ ಪ್ರತಿಯೊಂದರಲ್ಲಿ ಮುಖಂಡರೇ ಪ್ರಮುಖರಿದ್ದಾರಂತೆ. ಸರಕಾರವು ಈ ಕುರಿತು ಮುಂದೇನು ಮಾಡುವುದೆಂದು ಜನತೆಯು ಕುತೂಹಲದಿಂದ ನೋಡುತ್ತಿದೆ. (ಬಿ)

ಆಸ್ಪತ್ರೆಗೆಮಂತ್ರಿಗಳ ಭೇಟಿ

ಬೆಂಗಳೂರು ಡಿ 18— ಚನ್ನಪಟ್ಟಣ ಗಲಭೆಯಲ್ಲಿ ಗಾಯಗೊಂಡು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವರನ್ನು ಆರೋಗ್ಯ ಮಂತ್ರಿ ಡಾ|| ರಾಯನ್ನರು ಕಂಡು ಯೋಗಕ್ಷೇಮ ವಿಚಾರಿಸಿದರು.

ಪೌರಸಭೆಗೆ ನಾಮಕರಣ ಸದಸ್ಯರು

ಬೆಂಗಳೂರು ಡಿ 18 — 1947 ನೇ ಜನವರಿಯಿಂದ ಪುನರ್ರಚಿತವಾಗುವ ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲಿಗೆ ಮಿ|| ಗಳಾದ ಟಿ. ಎಸ್. ಆಲ್ಲೀ ಖಾನ್ ಮಹಮದ್ ಸೇಠ್ ಮಿರ್ ನೂರ್ ಹುಸೇನ್ ಎಫ್. ಸಿ ದೇವರಾಜೇ ಅರಸ್, ಕೆ. ಸಿದ್ದಯ್ಯ ಮತ್ತು ಡಬ್ಲ್ಯು ಹೆಚ್. ಥಿಯೋಬಾಲ್ಡ್, ಇವರು ಸದಸ್ಯರಾಗಿ ನಾಮಕರಣ ಮಾಡಲ್ಪಟ್ಟಿದ್ದಾರೆ.

ಬೆಂಗಳೂರು ಪೌರಸಭೆ

ಬೆಂಗಳೂರು ಪೌರಸಭೆಗೆ ಮಿ || ಎ. ಜೆ. ಖಿಲೀಲರು ಅಧ್ಯಕ್ಷರಾಗಿಯೂ, ಶ್ರೀ ಸಿಂಗಂ ರಂಗಸ್ವಾಮಪ್ಪನವರು ಉಪಾಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟಿರುವರು.

ಯಹೂದಿಸ್ಥಾನವೇ ?

ಬಾಸೆಲ್ ಡಿ 17— ಪಾಲಿಸ್ಟೈನಿನ ಎಲ್ಲಾ ಭಾಗವೂ ಸೇರಿ ಯಹೂದಿ ರಾಜ್ಯ ಸ್ಥಾಪನೆಯಾಗಬೇಕೆಂದು ಯಹೂದಿ ಕಾಂಗ್ರೆಸ್ಸಿನಲ್ಲಿ ಯಹೂದಿ ವಿಜ್ಞಾನಿ ಅಧ್ಯಕ್ಷರು ತಿಳಿಸಿದರು

ಬೊಂಬಾಯಿನ ಪರಿಸ್ಥಿತಿ

ಬೊಂಬಾಯಿ ಡಿ 17— ನಿನ್ನೆ 5 ಇರಿತಗಳು ನಡೆದಂತೆಯೂ, ದೊಂಬಿ ಚದುರಿಸಲು ಪೋಲೀಸಿನವರು ಒಂದು ಸಾರಿ ಗುಂಡು ಹಾರಿಸಿದಂತೆಯೂ ವರದಿಯಾಗಿದೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚಂಗಲರಾಯರೆಡ್ಡಿಯವರು ತಮ್ಮ ಬೆಂಗಳೂರು ಜಿಲ್ಲಾ ಪ್ರವಾಸವನ್ನು ಮುಂದುವರಿಸುವರು.

ಪ್ರತಿಬಂಧಕಾಜ್ಞೆ

ಮೈಸೂರು ಡಿ 18 — ಚನ್ನಪಟ್ಟಣದ ಗಲಭೆಯಿಂದ ಎಚ್ಚರಿಕೆ ತೆಗೆದುಕೊಂಡು ಸಂಸ್ಥಾನದ ಎಲ್ಲಾ ಕಡೆಯು ಪೊಲೀಸು ಉಸ್ತುವಾರಿ ಕ್ರಮ ಹೆಚ್ಚಿಸಲಾಗಿದೆ. ಮೈಸೂರು ನಗರ ಮತ್ತು ಸುತ್ತ ಮುತ್ತ 5 ಮೈಲಿಯಲ್ಲಿ 10 ದಿನಗಳವರೆಗೆ ಮೆರವಣಿಗೆ ವಿಾಟಿಂಗು ಮುಂತಾದವು ನಡೆಯಕೂಡದೆಂದು ಡಿ|| ಮ್ಯಾಜಿಸ್ಟ್ರೇಟರು ನಿರ್ಬಂಧ ಆಜ್ಞೆ ಹೊರಡಿಸಿದ್ದಾರೆ.

ಭಂಗಾರ

ಲಂಡನ್ ಡಿ 17 — ಸೈಬೀರಿಯಾದ ಮುರೋಜಿನಯಾ ನದಿಯಲ್ಲಿ ಒಬ್ಬ ಭಂಗಾರದ ಗಣಿ ಕಾರ್ಮಿಕನು 240 ಔನ್ಸು ತೂಕವಿದ್ದು 2100 ಪೌಂಡು ಬೆಲೆಯ ಒಂದು ಚಿನ್ನದ ಘಟ್ಟಿಯನ್ನು ಕಂಡನೆಂದು ಮಾಸ್ಕೋ ರೇಡಿಯೋ ಸುದ್ದಿ.

ರಾಜ್ಯಾಂಗ ರಚನಾ ಸಭೆ

ಪಂ|| ನೆಹರೂರವರ ನಿರ್ಣಯದ ಮೇಲಿನ ಚರ್ಚೆ ನಡೆಯುತ್ತಿದೆ. ಇದರ ಸಂಬಂಧ ಚರ್ಚೆಯು 27 ನೇ ತಾರೀಖಿನಲ್ಲಿ ಮುಗಿಯಬೇಕೆಂದು ಪಟೇಲರು ಹೇಳಿದರು.

ಪಂ|| ನೆಹ್ರೂರವರ ನಿರ್ಣಯವನ್ನು ಗಾಂಧೀಜಿ ಸರಿಯೆಂದಿರುವರು.

ಡಾ|| ಆಂಬೇಡ್ಕರರು ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಭಾರತವು ಅಖಂಡ ರಾಷ್ಟ್ರವೆಂದೂ ಲೀಗನ್ನೂ ಸಭೆಗೆ ಸೇರಿಸಿಕೊಳ್ಳಬೇಕೆಂದೂ ತಿಳಿಸಿದರು.

ಚನ್ನಪಟ್ಟಣದ ಗಲಭೆ

ಸಂಬಂಧದ ವಿಷಯವನ್ನು ಕುರಿತು ಬೆಂಗಳೂರಿನಲ್ಲಿ ನಿನ್ನೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚಂಗಲರಾಯರೆಡ್ಡಿಯವರು ಪತ್ರಿಕೆ ಸಮ್ಮೇಳನ ನಡೆಸಿದರು. "ಚನ್ನಪಟ್ಟಣದ ದುರಂತರವನ್ನು ವಿವರಿಸಿ ಸಂಪೂರ್ಣ ಶಾಂತಿ ನೆಲೆಸಿದೆ ಎಂದರು. ಹಿಂದೂ ಮುಸ್ಲಿಂಮರು ಒಗ್ಗಟ್ಟಾಗಿ ಸೌಹಾರ್ದದಿಂದ ವರ್ತಿಸಿ ಜವಾಬ್ದಾರಿ ಸರಕಾರ ಸ್ಥಾಪಿಸಬೇಕೆಂದರು. ಗಲಭೆಯಲ್ಲಿ ಯಾವ ಕೋಮಿನ ಸ್ತ್ರೀಯರಿಗೂ ಮಾನ ಭಂಗವಾಗಲಿಲ್ಲವೆಂದರು. ಸ್ಥಳಿಯ ಮುಖಂಡರನ್ನು ಭೇಟಿ ಮಾಡಿದ ವಿಷಯ ವಿವರಿಸಿದರು.

ವಿಶ್ವಾಸ ಚಿಕಿತ್ಸೆ

ಅದ್ಭುತಗಳ ಯುಗವು ಕಳೆದುಹೋದದಿಲ್ಲ.

ಲೋಡ್ಸ್ ಎಂಬಲ್ಲಿ ಅದ್ಭುತ ಚಿಕಿತ್ಸೆಯೊಂದನ್ನು ಅಲ್ಲಿಯ ರೋಮ್ ಕೆಥೋಲಿಕ್ ಅಧಿಕಾರಿಗಳು ಅಧಿಕೃತವೆಂದು ರಿಜಿಸ್ಟರ್ ಕೂಡಾ ಮಾಡಿದ್ದಾರೆ.

ಫ್ರೆಂಕ್ಯೂಸ್ ಪಾಸ್ಕಲನೆಂಬ ನಾಲ್ಕು ವರ್ಷದ ಹುಡುಗನು ಹುಟ್ಟು ಕುರುಡನು. ಮಾತ್ರವಲ್ಲ ಅವನ ಕೈಕಾಲುಗಳಿಗೆ ಪಕ್ಷವಾತ ಹಿಡಿದಿತ್ತು. ಅವನನ್ನು ಯಾರೋ ಕೆಲವು ಯಾತಾರ್ಥಿಗಳು ತಮ್ಮ ಸಂಗಡ ಪೊ (ಪಿರೆನೀಸ್) ದಿಂದ ಲೋರ್ಡ್ ತನಕ ತಂದರು. ಆ ಶ್ಚರ್ಯವೆನ ಬೇಕು. ಅಲ್ಲಿಗ ಒಂದೊಡನೆ ಹುಡುಗನಿಗೆ ಕಣ್ಣು ಬಂತು. ಅವನ ಪಕ್ಷವಾತಬಿಟ್ಟು ಹೋಯಿತು.

ಈ ವಿಶ್ವಾಸ ಚಿಕಿತ್ಸೆಯು ಪ್ರತ್ಯಕ್ಷ ನಡೆಯಿದೆನ್ನು ಬಗ್ಗೆ ಲೂರ್ಡ್‌ದಲ್ಲಿಯ 11 ಮಂದಿ ಪ್ರಸಿದ್ಧ ವೈದ್ಯರು ವಂದಿಗೆ ಸಹಿ ಮಾಡಿದ್ದಾರೆ. (ಪ್ರ)

Edited, Printed and Published by M. S Krishna Rao at the Satyavadi Press Chamaraj Agrahar, Mysore.

ವಿಜಯ ಪಿಚ್ಚರ್ಸ್

ಬೆಂಗಳೂರಿನ ಶ್ರೀ ವಿಜಯ ಪಿಕ್ಚರ್ಸ್ ನವರು ಕುಂಡಲಕೇಶಿ ಮತ್ತು ಪೊನ್ನುರುವಿ ಎಂಬ ತಮಿಳು ಚಿತ್ರದ ಹಕ್ಕನ್ನು ಪಡೆದಿರುವರೆಂದು ತಿಳಿಸುತ್ತಾರೆ.

ನೆಹರೂ ಪ್ರತಿಮೆ

ಪ್ರಸಿದ್ಧ ಶಿಲ್ಪಿಯಾದ ಎಪ್ಸ್ಟೀನನು ಲಂಡನ್ನಿನಲ್ಲಿ ಪಂಡಿತ ನೆಹರುಗಳ ಪ್ರತಿಮೆ ತಯಾರಿಸುತ್ತಿರುವನು.

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ದನಗಳಿಗೆ ನೋವಿಲ್ಲ

ಮದರಾಸು ಡಿ 17 — ದನಗಳಿಗೆ ಅಹಿಂಸೆಯು ಸರಿಯಾಗಿ ಸಿಕ್ಕಲು ಅವುಗಳ ನಿಯಂತ್ರಣ ಮತ್ತು ಹಂಚಿಕೆ ವ್ಯವಸ್ಥೆಯನ್ನು ಸರಕಾರವು ಕೈಗೊಂಡಿದೆ.

At Opera ⁼⁼ From 20–12–46

ಸೂರಿಬಾಬು, ರಾಜ್ಯಂ, ಸೌದಾಮಿನಿ, ಚಂದ್ರಕಲಾ, ಲಿಂಗಮೂರ್ತಿ, ಉಮಾಮಹೇಶ್ವರರಾವ್ ಮಾತ್ರವಹಿಸಿರುವ

ನಾರದ - ನಾರದಿ

[ತೆಲಗು]

At Ranjit_____ From 20–12–46

ನೂರ್‌ಜಹಾ — ಸುರೇಂದ್ರ — ಜಹರ್ ರಾಜಾ — ಸುರಿಯ

ಪಾತ್ರವಹಿಸಿರುವ

ಅನ್ನೋಲ್ ಘುಡಿ

ಶಕ್ತಿ ಸುಧಾ

ಸೇಪಸಿ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನಶಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality

— ರಾಜ್‌ಕಮಲ್, ಮೈಸೂರು —

20-12-46 ರಿಂದ ⁼⁼⁼ **6** ನೇ ವಾರ

" ಡಾಕ್ಟರ್ ಕೋಟ್ನಿಸ್ ಕಿ ಅಮರ್ ಕಹಾನಿ "

ಭೂಮಿಕೆ:— * ಜಯಶ್ರೀ * ಶಾಂತಾರಾಂ * ಉಲ್ಲಾಸ್

20-12-46 ರಿಂದ **7** ದಿನಗಳು ಮಾತ್ರ. ಬೆಳಿಗ್ಗೆ 10–30 ಕ್ಕೆ

— ಬರ್ಧ —

ಪಾತ್ರ- * ಅಶೋಕ್ ಕುಮಾರ್ * ಲೀಲಾ ಚಿಟ್ನಿಸ್

Vijaya Agencies, Mysore

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ,

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ಕರಸ್ತೆ, ಜಿ. ಟಿ. ಮದರಾಸು.